# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಐವನ್ ಡಿ.ಸೋಜಾ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1251 |
| ಉತ್ತರಿಸಬೇಕಾದ ದಿನಾಂಕ | : | 17.03.2020. |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ನಡೆಯುವ ಸಹಕಾರಿ ಸಂಘಗಳ ಚುನಾವಣೆಯಲ್ಲಿ ಮತದಾನ ನಡೆಸಲು ಹೈಕೋರ್ಟ್ ನಿರ್ದೇಶನವನ್ನು ತಡೆಯಲು ಮತ್ತು ಸರಿಯಾದ ನಿಯಮಗಳನ್ನು ರೂಪಿಸಲು ಸರ್ಕಾರ ವಿಫಲಗೊಂಡಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ವಿವರ ನೀಡುವುದು) | ಭಾರತೀಯ ಸಂವಿಧಾನ 97ನೇ ತಿದ್ದುಪಡಿ ಅಧಿನಿಯಮ 2011ರ ಉಪಬಂಧಗಳಿಗೆ ಅನುಸಾರವಾಗಿ ಕರ್ನಾಟಕ ವಿಧಾನ ಮಂಡಲವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2013ರಲ್ಲಿ ತಿದ್ದುಪಡಿ ತರಲಾಗಿದೆ.<br>ಸಹಕಾರ ಸಂಘಗಳ ಸದಸ್ಯರು ಸಂಘಗಳ ಸಾಮಾನ್ಯ ಸಭೆ ಮತ್ತು ಆರ್ಥಿಕ ಚಟುವಟಿಕೆಗಳ ಕುರಿತಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂನ ಉದ್ಧೃತ ಭಾಗ ಕೆಳಕಂಡಂತಿದೆ.:-<br><br>**"ಕಲಂ 20(2) (ಎ-iv) ಕಳೆದ ಐದು ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ಡೆಲಿಗೇಟ್.**<br><br>**ಕಲಂ 20(2) (ಎ-v) ಮೂರು ನಿರಂತರ ಸಹಕಾರ ವರ್ಷಗಳವರೆಗೆ ಒಂದು ಸಹಕಾರ ಸಂಘದ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಬಹುದಾದಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ ಅಥವಾ ಪ್ರತಿನಿಧಿ**<br>**[ಪರಂತು, (ಎ-iv) ಹಾಗೂ (ಎ-v)ನೇ ಉಪಖಂಡಗಳಲ್ಲಿರುವ ಸದಸ್ಯರುಗಳ ಸಂದರ್ಭದಲ್ಲಿ, ಅಂಥ ಸದಸ್ಯರು ಮೂರು ವರ್ಷಗಳ ಅವಧಿಗೆ ಸರ್ವಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.]"**<br><br>ಮೇಲ್ಕಂಡ ನಿಯಮಗಳಲ್ಲಿ ಯಾವುದೇ ಗೊಂದಲಕಾರಿ ವಿಷಯ ಇರುವುದಿಲ್ಲ. ಗೌರವ ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ಸದರಿ ಕಲಂ ಅನ್ವಯ ಮತದಾನ ವಂಚಿತರಾದ ಹಲವಾರು ಸಂಘಗಳ ಸದಸ್ಯರು ದಾವಾ ಪ್ರಕರಣ ದಾಖಲಿಸುವ ಮುಖೇನ ತಡೆಯಾಜ್ಞೆ ಪಡೆದು ಅರ್ಹ ಮತದಾರರ ಪಟ್ಟಿಗೆ ಸೇರುತ್ತಿರುವುದು ನಿಜವಾಗಿರುತ್ತದೆ.<br><br>ಇಡೀ ವರ್ಷದಲ್ಲಿ ಆಯಾ ಸಹಕಾರ ಸಂಘದ ಅಭಿವೃದ್ಧಿ, ಆಗು-ಹೋಗುಗಳು ಹಾಗೂ ವಹಿವಾಟು ಅಭಿವೃದ್ಧಿ ಬಗ್ಗೆ ಚರ್ಚಿಸಿ ಆಡಳಿತ ಮಂಡಳಿಯನ್ನು ನಿಯಂತ್ರಿಸುವ ಪೂರ್ಣ ಅಧಿಕಾರವನ್ನು ವಾರ್ಷಿಕ ಸರ್ವ ಸದಸ್ಯರ ಸಭೆ ಹೊಂದಿರುತ್ತದೆ. ಇಂಥ ವೇದಿಕೆಯಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಸಂಘದ ಏಳಿಗೆಗೆ ಪಾಲ್ಗೊಳ್ಳಬೇಕು ಎಂಬುದು ಸಾಂವಿಧಾನಿಕ ತಿದ್ದುಪಡಿಯ ಆಶಯವಾಗಿರುತ್ತದೆ.<br><br>ಆದರೆ ಇತ್ತೀಚೆಗೆ ಬರುತ್ತಿರುವ ದೂರು ಅರ್ಜಿಗಳು ಹಾಗೂ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸದೇ ವಿನಾಯಿತಿಯನ್ನು ಕೋರುತ್ತಿರುವುದು ಸಹಕಾರ ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಅಸಮಂಜಸವಾಗಿರುತ್ತದೆ. |

| | | |
|---|---|---|
| | | ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿ ಮತ್ತು ಸದಸ್ಯರು ಕನಿಷ್ಠ ಪ್ರಮಾಣದ ವಹಿವಾಟು ನಡೆಸಲಿ ಎಂಬ ಸದುದ್ದೇಶದಿಂದ ಕಲಂ 20(2) (ಎ–iv), (ಎ–v) ಅಳವಡಿಸಿರುವುದು ಸಹಕಾರಿ ತತ್ವಗಳಿಗನುಸಾರವಾಗಿ ಮತ್ತು ಎಲ್ಲಾ ಸಹಕಾರಿಗಳು ಈ ನಿಯಮವನ್ನು ತಪ್ಪದೇ ಅನುಚಾನವಾಗಿ ಪಾಲಿಸಿದಲ್ಲಿ ಸಹಕಾರ ಕ್ಷೇತ್ರ ಹಾಗು ಚಳುವಳಿ ಸದೃಢಗೊಳ್ಳಲಿದೆ. ಆದ್ದರಿಂದ ನಿಯಮಗಳನ್ನು ರೂಪಿಸುವಲ್ಲಿ ಸರ್ಕಾರ ವಿಫಲಗೊಂಡಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ) | ಸಹಕಾರಿ ಸಂಘಗಳಲ್ಲಿ ಅಕ್ರಮ/ಕಾನೂನು ಬಾಹಿರವಾಗಿ ವ್ಯವಹಾರ ನಡೆಸಿದ ಎಷ್ಟು ಸಂಘಗಳನ್ನು ಗುರುತಿಸಿ ಕ್ರಮಕೈಗೊಳ್ಳಲಾಗಿದೆ; (ವಿವರ ನೀಡುವುದು) | ರಾಜ್ಯದಲ್ಲಿ ಅಕ್ರಮ/ಕಾನೂನು ಬಾಹಿರವಾಗಿ ವ್ಯವಹಾರ ನಡೆಸಿದ 6050 ಸಹಕಾರ ಸಂಘಗಳನ್ನು ಗುರುತಿಸಿ ತಪ್ಪಿತಸ್ಥ ಸಹಕಾರ ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವಿರುದ್ದ ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗಿದೆ. |
| ಇ) | ರಾಜ್ಯದಲ್ಲಿ ಸಹಕಾರಿ ಸಂಘಗಳು ನಷ್ಟದಲ್ಲಿ ಇರುವುದು ನಿಜವೇ; (ವಿವರ ನೀಡುವುದು) | ದಿನಾಂಕ 31.03.2019ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಒಟ್ಟು 43608 ಸಹಕಾರ ಸಂಘಗಳಿದ್ದು, ಈ ಪೈಕಿ ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಸಂಖ್ಯೆ 13824 ಇರುತ್ತವೆ.<br>**ಜಿಲ್ಲಾವಾರು ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ.** |
| ಈ) | ಸಹಕಾರಿ ಸಂಘಗಳ ರಕ್ಷಣೆಗೆ ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?<br>**(ವಿವರ ನೀಡುವುದು)** | ಸಹಕಾರ ಸಂಘಗಳ ರಕ್ಷಣೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಸಹಕಾರ ಸಂಘಗಳ ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮಗಳನ್ನು ಅನುಷ್ಠಾನಗೊಳಿಸಲು ಸಹಕಾರ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಗೊಂಡಿದ್ದು, ಅದರನ್ವಯ ಆಯಾಯ ಅಧಿಕಾರಿಗಳು ಸದರಿ ಅಧಿನಿಯಮ ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸಲು ಅಧಿಕಾರದತ್ತವಾಗಿರುತ್ತದೆ.<br>ಅರೆನ್ಯಾಯಿಕ ಪ್ರಕರಣಗಳಲ್ಲಿ ಮೂಲ ಕಾರ್ಯವ್ಯಾಪ್ತಿಹೊಂದಿದ ಅಧಿಕಾರಿಯು ಹಾಗೂ ತತ್ಸಂಬಧ ಮೇಲ್ಮನವಿ ಪ್ರಾಧಿಕಾರಗಳು ಹಾಗೂ ಅಂತಿಮವಾಗಿ ಗೌ// ಉಚ್ಚನ್ಯಾಯಾಲಯದಲ್ಲಿಯೂ ಸಹ ಸಹಕಾರ ಸಂಘಗಳು ಭಾದಿತರಾದ ಪಕ್ಷದಲ್ಲಿ ರಕ್ಷಣೆ ಪಡೆಯಲು ಅರ್ಹರಿರುತ್ತಾರೆ. |

**ಸಂಖ್ಯೆ: ಸಿಒ 23 ಸಿಎಲ್‌ಎಮ್ 2020 (ಇ)**

ಎಸ್.ಟಿ.ಸೋಮಶೇಖರ್

**(ಎಸ್.ಟಿ ಸೋಮಶೇಖರ್)**

ಸಹಕಾರ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಐವನ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) ಇವರ ಪ್ರಶ್ನೆ ಸಂಖ್ಯೆ: 1048(1251) ರಲ್ಲಿ ಉಪ ಪ್ರಶ್ನೆ (ಇ) ಕ್ಕೆ ಸಂಬಂಧಿಸಿದಂತೆ ಉತ್ತರ

ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ (ದಿನಾಂಕ 31.03.2019ರ ಅಂತ್ಯಕ್ಕೆ) |
|---|---|---|
| 1 | ಬೆಂಗಳೂರು ವಲಯ-1 | 209 |
| 2 | ಬೆಂಗಳೂರು ವಲಯ-2 | 307 |
| 3 | ಬೆಂಗಳೂರು ವಲಯ-3 | 199 |
| 4 | ಬೆಂಗಳೂರು ವಲಯ-4 | 241 |
| 5 | ಬೆಂಗಳೂರು ಗ್ರಾಮಾಂತರ | 129 |
| 6 | ರಾಮನಗರ | 101 |
| 7 | ತುಮಕೂರು | 581 |
| 8 | ಚಿತ್ರದುರ್ಗ | 635 |
| 9 | ಕೋಲಾರ | 396 |
| 10 | ಚಿಕ್ಕಬಳ್ಳಾಪುರ | 302 |
| 11 | ಶಿವಮೊಗ್ಗ | 382 |
| 12 | ದಾವಣಗೆರೆ | 723 |
| 13 | ಮೈಸೂರು | 838 |
| 14 | ಮಂಡ್ಯ | 135 |
| 15 | ಹಾಸನ | 205 |
| 16 | ಕೊಡುಗು | 102 |
| 17 | ಮಂಗಳೂರು | 118 |
| 18 | ಚಿಕ್ಕಮಗಳೂರು | 144 |
| 19 | ಚಾಮರಾಜನಗರ | 154 |
| 20 | ಉಡುಪಿ | 63 |
| 21 | ಬೆಳಗಾಂ | 2066 |
| 22 | ಬಿಜಾಪುರ | 331 |
| 23 | ಧಾರವಾಡ | 572 |
| 24 | ಕಾರವಾರ | 224 |
| 25 | ಹಾವೇರಿ | 272 |
| 26 | ಗದಗ | 506 |
| 27 | ಬಾಗಲಕೋಟೆ | 368 |
| 28 | ಗುಲ್ಬರ್ಗಾ | 1207 |
| 29 | ರಾಯಚೂರು | 596 |
| 30 | ಬೀದರ್ | 234 |
| 31 | ಬಳ್ಳಾರಿ | 661 |
| 32 | ಕೊಪ್ಪಳ | 247 |
| 33 | ಯಾದಗಿರಿ | 576 |
| | ಒಟ್ಟು | **13824** |